RNU AIR DHARWAD

APRIL 17, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಬಿರು ಬೇಸಿಗೆ; ರಾಜ್ಯದ 213 ತಾಲೂಕುಗಳು ಹಾಗೂ 2 ಸಾವಿರದ 410 ಗ್ರಾಮ ಪಂಚಾಯಿತಿಗಳು, ಕುಡಿಯುವ ನೀರಿನ ಸಮಸ್ಯೆ ಎದುರಿಸುವ ಸಾಧ್ಯತೆ.
- ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯಿಂದ, 'ಶಾಲಾ ಚಲೋ ಪ್ರವೇಶೋತ್ಸವ'.
- ಉತ್ತರಕನ್ನಡ ಜಿಲ್ಲೆ, ಗೋಕರ್ಣದ ಮಂಜುಗುಣಿಯಲ್ಲಿ, ಅಪರೂಪದ ಏಡಿ ಪ್ರಭೇದ, 'ಬ್ರೆಚ್ಯುರನ್ ಕ್ರ್ಯಾಬ್' ಪತ್ತೆ.
- "ರೋಗ ನಿರ್ಣಯ, ಆರೈಕೆಗೆ ಮೊದಲ ಹೆಜ್ಜೆ"; ಧ್ಯೇಯದೊಂದಿಗೆ, ಇಂದು, ವಿಶ್ವ ಹಿಮೋಫಿಲಿಯಾದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಬಿರು ಬೇಸಿಗೆ ಹಿನ್ನೆಲೆ, ಕಲಬುರ್ಗಿ ಜಿಲ್ಲೆಯ 147 ಗ್ರಾಮಪಂಚಾಯಿತಿಗಳು ಸೇರಿದಂತೆ, ಬಾಗಲಕೋಟೆ ಜಿಲ್ಲೆಯ 114, ಬೆಳಗಾವಿ ಜಿಲ್ಲೆಯ 127, ಚಿಕ್ಕಮಗಳೂರು ಜಿಲ್ಲೆಯ 115, ಹಾವೇರಿ ಜಿಲ್ಲೆಯ 138, ಮಂಡ್ಯ ಜಿಲ್ಲೆಯ 130, ತುಮಕೂರು ಜಿಲ್ಲೆಯ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯಿತಿಗಳಲ್ಲಿ, ಕುಡಿಯುವ ನೀರಿನ ಸಮಸ್ಯೆಯನ್ನು, ಜಿಲ್ಲಾಡಳಿತಗಳು ಗುರುತಿಸಿವೆ. ಬೆಂಗಳೂರಿನ ವಿಧಾನಸೌಧದ ಸಭಾಂಗಣದಲ್ಲಿ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಸಿ.ಇ.ಒ.ಗಳ ಸಭೆ ನಡೆಯಿತು. ಈ ಸಭೆಗೆ ಮಾಹಿತಿ ನೀಡಿದ ಅಧಿಕಾರಿಗಳು, ಪ್ರಸ್ತುತ, 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು, ಅಂದಾಜಿಸಿದ್ದಾಗಿ ತಿಳಿಸಿದರು.

<><><>

ರಾಜ್ಯದ ಒಟ್ಟು 213 ತಾಲೂಕುಗಳು ಹಾಗೂ 2 ಸಾವಿರದ 410 ಗ್ರಾಮ ಪಂಚಾಯಿತಿಗಳು, ಕುಡಿಯುವ ನೀರಿನ ಸಮಸ್ಯೆ ಎದುರಿಸಲಿವೆ ಎಂದು, ಅಂದಾಜಿಸಲಾಗಿದೆ. ಪ್ರಸ್ತುತ, ರಾಜ್ಯದ 114 ತಾಲೂಕುಗಳ 598 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಇದೆ. 137 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ, ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದೆ.

<><><>

ಅರ್ಹ ರೈತರಿಗೆ ರಸಗೊಬ್ಬರ ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆವಹಿಸಲು, ಮುಖ್ಯಮಂತ್ರಿ, ಅಧಿಕಾರಿಗಳಿಗೆ ಸೂಚಿಸಿದರು.

<><><>

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ, ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು, 'ಶಾಲಾ ಚಲೋ ಪ್ರವೇಶೋತ್ಸವ' ಆಂದೋಲನವನ್ನು, ರಾಜ್ಯವ್ಯಾಪಿ ಆರಂಭಿಸಲು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಯೋಜಿಸಿದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ, 3 ರಿಂದ 8ನೇ ತರಗತಿ ವರೆಗಿನ, ಶಿಕ್ಷಣದಗುಣಮಟ್ಟ ಸುಧಾರಣೆಗೆ, ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ ಅಥವಾ ಅಡಿಪಾಯದ ಸಾಕ್ಷರತೆ ಮತ್ತು ಸಂಖ್ಯಾ ಸಾಮರ್ಥ್ಯ – *ಫೌಂಡೇಷನ್ ಲಿಟರಸಿ ಆ್ಯಂಡ್ ನ್ಯುಮರಸಿ – ಎಫ್.ಎಲ್.ಎನ್.* ಯೋಜನೆ ಜಾರಿಗೊಳಿಸಲು, ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಸರ್ಕಾರಿ ಶಾಲೆಗೆ, ವಿದ್ಯಾರ್ಥಿಗಳನ್ನು ಆಕರ್ಷಿಸಲು, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವಿಜ್ಞಾನದ ಚಟುವಟಿಕೆಗಳನ್ನು ವಿಸ್ತರಿಸಲು, ಶಿಕ್ಷಣ ಇಲಾಖೆ ಮುಂದಾಗಿದೆ.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ, ಉಮೇಶ ಬೊಮ್ಮಕ್ಕನವರ.

<><><>

ಬಿ.ಇ.ಓ. ಉಮೇಶ ಬೊಮ್ಮಕ್ಕನವರ ಧ್ವನಿ 30 ಸೆಕೆಂದುಗಳು

<><><>

ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಮರುವಿಂಗಡಣೆ ವಿಚಾರದಲ್ಲಿ, ಪ್ರತಿಪಕ್ಷಗಳು ಅನಗತ್ಯವಾಗಿ, ಉತ್ತರ ಹಾಗೂ ದಕ್ಷಿಣ ಭಾರತವನ್ನು ವಿಭಜಿಸುವ ಮೂಲಕ, ರಾಜಕೀಯ ಮಾಡುತ್ತಿವೆ ಎಂದು, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಮಹಿಳಾ ಮೀಸಲಾತಿಯ, ನಾರಿ ಶಕ್ತಿ ವಂದನ್ ಮಸೂದೆ ಹಾಗೂ ಕ್ಷೇತ್ರ ಮರುವಿಂಗಡಣೆ ಮಸೂದೆಯನ್ನು, ಸರ್ವಾನುಮತದಿಂದ ಅಂಗೀಕರಿಸಬೇಕು ಎಂಬ, ಆಶಯ ಹೊಂದಿದ್ದಾರೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಇದು ಅವಿಸ್ಮರಣೀಯ ಘಳಿಗೆ, ಎಂದರು.

<><><>

ಉಭಯ ಮಸೂದೆಗಳ ಬಗ್ಗೆ, 15 ರಿಂದ 18 ಗಂಟೆಗಳ ಚರ್ಚೆ ಬಳಿಕ, ಲೋಕಸಭೆಯಲ್ಲಿ ಅಂಗೀಕರಿಸಲು, ಇಂದು ಸಂಜೆ 4 ಗಂಟೆಗೆ ಮತದಾನ ನಡೆಯಲಿದೆ ಎಂದು, ಲೋಕಸಭಾಧ್ಯಕ್ಷ ಓಂ ಬಿರ್ಲಾ, ಪ್ರಕಟಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಕುಮಟಾ ತಾಲೂಕು, ಗೋಕರ್ಣ ಬಳಿಯ,ಮಂಜುಗುಣಿ ಗ್ರಾಮದ, ಮ್ಯಾನ್‌ಗ್ರೋವ್ ಕಾಡಿನ ತಟದಲ್ಲಿ, ವಿಶಿಷ್ಟ ಪ್ರಭೇದದ ಏಡಿ, 'ಬ್ರೆಚ್ಯುರನ್ ಕ್ರ್ಯಾಬ್' ಪ್ರಥಮ ಬಾರಿಗೆ, ಪಶ್ಚಿಮ ಕರಾವಳಿಯಲ್ಲಿ ಪತ್ತೆಯಾಗಿದೆ. ಕಾರವಾರದ, ಕಡಲ ಜೀವಶಾಸ್ತ್ರ, ಸ್ನಾತಕೋತ್ತರ ಅಧ್ಯಯನ ವಿಭಾಗದ ವಿದ್ಯಾರ್ಥಿ, ಪ್ರಥಮ ದೀಪಕ ಗುನಗಾ, ಈ ವಿಶಿಷ್ಟ ಪ್ರಜಾತಿಯ ಏಡಿಯನ್ನು ಪತ್ತೆ ಹಚ್ಚಿದ್ದಾರೆ. ಪ್ರಾಧ್ಯಾಪಕ ಕಿರಣ ವಾಸುದೇವಮೂರ್ತಿ ಅವರ ಮಾರ್ಗದರ್ಶನದಲ್ಲಿ, ಶಿವಕುಮಾರ ಹರ್ಗಿ ನೇತೃತ್ವದಲ್ಲಿ, ಸಂಶೋಧನಾ ಪ್ರಬಂಧ

ಸಿದ್ಧವಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಅಂಕೋಲಾ ತಾಲೂಕು ಸುರ್ವೆ ಗ್ರಾಮದ ಸಂಶೋಧಕ, ಪ್ರಥಮ ದೀಪಕ ಗುನಗಾ.

<><><>

ದೀಪಕ ಗುನಗಾ ಧ್ವನಿ 38 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು, ವಿಶ್ವ, ಹಿಮೋಫಿಲಿಯಾ ಜಾಗೃತಿದಿನ. “ರೋಗ ನಿರ್ಣಯ; ಆರೈಕೆಗೆ ಮೊದಲ ಹೆಜ್ಜೆ” ಎಂಬ ಘೋಷವಾಕ್ಯದೊಂದಿಗೆ, *ವರ್ಲ್ಡ್ ಫೆಡರೇಶನ್ ಆಫ್ ಹಿಮೋಫಿಲಿಯಾ*,ವಿಶ್ವಾದ್ಯಂತ ಆನುವಂಶಿಕವಾಗಿ, ರಕ್ತಸ್ರಾವದ ಅಸ್ವಸ್ಥತೆಗಳನ್ನು ಹೊಂದಿರುವ, ಅಂದಾಜು ಶೇಕಡ 75 ಕ್ಕಿಂತ ಹೆಚ್ಚು ಜನರನ್ನು ಗುರುತಿಸುವ, ತುರ್ತು ಅಗತ್ಯವನ್ನು, ಒತ್ತಿ ಹೇಳುತ್ತದೆ. ಕಸುಮ ರೋಗದ ಆರೋಗ್ಯಾಕಾಂಕ್ಷಿಗಳಿಗೆ, ಸರಿಯಾದ ಚಿಕಿತ್ಸೆ ಮತ್ತು ಆರೈಕೆ ಸಕಾಲಿಕವಾಗಿ ಲಭಿಸಿದಲ್ಲಿ, ಸುಧಾರಿತ ಜೀವನ ಸಾಧ್ಯ ಎಂಬ ವಿಶ್ವಾಸ ಮೂಡಿಸಲು, ಈ ದಿನ ಮೀಸಲು. *ಲೈಟ್ ಇಟ್ ಅಪ್ ರೆಡ್* ಅಭಿಯಾನ ಸಹ ಒಳಗೊಂಡಿದೆ.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ದಾವಣಗೆರೆಯ, ಜಗದ್ಗುರು ಜಯದೇವ ಮುರುಘರಾಜೇಂದ್ರ ವೈದ್ಯಕೀಯ ಮಹಾವಿದ್ಯಾಲಯದ, ರೋಗ ನಿದಾನಶಾಸ್ತ್ರದ ಪ್ರಾಧ್ಯಾಪಕ ಹಾಗೂ ಕರ್ನಾಟಕ ಹಿಮೋಫೀಲಿಯಾ ಸೊಸಾಯಿಟಿ ಅಧ್ಯಕ್ಷ, ಪದ್ಮಶ್ರೀ ಡಾಕ್ಟರ್ ಸುರೇಶ ಹನಗವಾಡಿ.

<><><>

ಡಾ. ಸುರೇಶ ಹನಗವಾಡಿ ಧ್ವನಿ 60 ಸೆಕೆಂದುಗಳು

<><><>

ಭ್ರ  ಷ್ಟಾಚಾರ ನಿರ್ಮೂಲನೆ ಹಾಗೂ ಆಡಳಿತ ಸುಧಾರಣೆಯಲ್ಲಿ, ಮಹತ್ವದ ಪಾತ್ರ ವಹಿಸಿರುವ, ‘ಕರ್ನಾಟಕ ಲೋಕಾಯುಕ್ತ’ ಸಂಸ್ಥೆ, 40 ವರ್ಷಗಳನ್ನು ಪೂರ್ಣಗೊಳಿಸಿದೆ. ತನ್ನಿಮಿತ್ತ ನಾಳೆ, ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ, ವಿಶೇಷ ಕಾರ್ಯಕ್ರಮ, ಜರುಗಲಿದೆ. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಸೂರ್ಯಕಾಂತ, ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಲೋಕಾಯುಕ್ತ ನಿಯತಕಾಲಿಕೆ, ಚುನಾಯಿತ ಪ್ರತಿನಿಧಿಗಳ ಆಸ್ತಿ ಮತ್ತು ಹೊಣೆಗಾರಿಕೆಗಳ, ಹೊಸ ಪೋರ್ಟಲ್ ಹಾಗೂ ಆನ್‌ಲೈನ್ ತನಿಖಾ ಮಾಡ್ಯೂಲ್, ಉದ್ಘಾಟಿಸಲಿದ್ದಾರೆ. ಹಿರಿಯ ನ್ಯಾಯಮೂರ್ತಿ ಅರವಿಂದಕುಮಾರ, ಲೋಕಾಯುಕ್ತ ಬಿ.ಎಸ್.ಪಾಟೀಲ, ಉಪ ಲೋಕಾಯುಕ್ತರಾದ, ಕೆ.ಎನ್. ಫಣೀಂದ್ರ ಮತ್ತು ಬಿ. ವೀರಪ್ಪ, ಭಾಗವಹಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಧಾರವಾಡ ವಲಯ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆ.ವಿ. ವಸಂತರೆಡ್ಡಿ, ರಂಗಾಯಣದ ಸಭಾಭವನದಲ್ಲಿ, "ತಿಂಗಳ ಹಕ್ಕಿ ಹಬ್ಬ"ವನ್ನು ಉದ್ಘಾಟಿಸಿದರು.

<><><>

ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ, ಕಲಬುರಗಿ ಜಿಲ್ಲೆಗೆ, 'ಆರೆಂಜ್ ಹೀಟ್ ವೇವ್ ಅಲರ್ಟ್' ಘೋಷಿಸಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆವಹಿಸಲು, ಸೂಚಿಸಿದೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರ, ಹೊಸನಗರ ಮತ್ತು ತೀರ್ಥಹಳ್ಳಿ ತಾಲೂಕುಗಳಲ್ಲಿ, ಕ್ಯಾಸನೂರು ಮಂಗನ ಕಾಯಿಲೆ ಪ್ರಕರಣಗಳು ವರದಿಯಾಗುತ್ತಿವೆ. ಸಾರ್ವಜನಿಕರು ಕಾಡಿಗೆ ತೆರಳಿ, ಒಣ ಎಲೆ ಸಂಗ್ರಹಿಸದಂತೆ, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಕೆ.ಎಸ್. ನಟರಾಜ, ಕೋರಿದ್ದಾರೆ.

<><><>

ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆ ಒಳಗೊಂಡ, ಮೆಸ್ಕಾಂ ವ್ಯಾಪ್ತಿಯಲ್ಲಿ, 465 ಜನ ಲೈನ್‌ಮನ್‌ಗಳು, ಮೇ ಅಂತ್ಯದೊಳಗೆ, ಕರ್ತವ್ಯಕ್ಕೆ ಹಾಜರಾಗಲಿದ್ದಾರೆ ಎಂದು, ಮೆಸ್ಕಾಂ ಅಧ್ಯಕ್ಷ, ಹರೀಶಕುಮಾರ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬಿರು ಬೇಸಿಗೆ; ರಾಜ್ಯದ 213 ತಾಲೂಕುಗಳು ಹಾಗೂ 2 ಸಾವಿರದ 410 ಗ್ರಾಮ ಪಂಚಾಯಿತಿಗಳು, ಕುಡಿಯುವ ನೀರಿನ ಸಮಸ್ಯೆ ಎದುರಿಸುವ ಸಾಧ್ಯತೆ.
- ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯಿಂದ, 'ಶಾಲಾ ಚಲೋ ಪ್ರವೇಶೋತ್ಸವ'.
- ಉತ್ತರಕನ್ನಡ ಜಿಲ್ಲೆ, ಗೋಕರ್ಣದ ಮಂಜುಗುಣಿಯಲ್ಲಿ, ಅಪರೂಪದ ಏಡಿ ಪ್ರಭೇದ, 'ಬ್ರೆಚ್ಯುರನ್ ಕ್ರ್ಯಾಬ್' ಪತ್ತೆ.
- "ರೋಗ ನಿರ್ಣಯ, ಆರೈಕೆಗೆ ಮೊದಲ ಹೆಜ್ಜೆ"; ಧ್ಯೇಯದೊಂದಿಗೆ, ಇಂದು, ವಿಶ್ವ ಹಿಮೋಫಿಲಿಯಾದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>